ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

**HASSAN INSTITUTE OF MEDICAL SCIENCES, HASSAN**

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699/ 231599**


# 16ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು,

ದಿನಾಂಕ: 22-06-2013ನೇ ಶನಿವಾರ, ಬೆಳಗ್ಗೆ :11:00 ಗಂಟೆಗೆ

:ಸ್ಥಳ:

ಕೊಠಡಿ ಸಂಖ್ಯೆ: 232, 2 ನೇ ಮಹಡಿ,

ವಿಧಾನ ಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599

# 16ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ದಿನಾಂಕ:22-06-2013 ರಂದು ಶನಿವಾರ ಬೆಳಗ್ಗೆ: 11-00 ಗಂಟೆಗೆ ಸನ್ಮಾನ್ಯ ಡಾ.ಶರಣ ಪ್ರಕಾಶ್ ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ: 232, 2ನೇ ಮಹಡಿ, ವಿಧಾನ ಸೌಧ , ಬೆಂಗಳೂರು ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 16ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಆಡಳಿತ ಮಂಡಳಿ ಸದಸ್ಯರ ಸಂಖ್ಯೆ:08** **ಹಾಜರಿದ್ದ ಸದಸ್ಯರ ಸಂಖ್ಯೆ:05**

## ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು

| | | | |
|---|---|---|---|
| 1 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಧಾನ ಸೌಧ, ಬೆಂಗಳೂರು | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಸರ್ಕಾರದ ಮಾನ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ. | ಸದಸ್ಯರು | -- |
| 04 | ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ. | ಸದಸ್ಯರು | ಹಾಜರಿರುತ್ತಾರೆ |
| 05 | ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | ಸದಸ್ಯರು | -- |
| 06 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ., ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ. | ಸದಸ್ಯರು | -- |
| 08 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | ದಿನಾಂಕ:13-03-2013 ರಂದು ನಡೆದ 15ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:13-03-2013 ರಂದು ನಡೆದ 15ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 1 | ವೈದ್ಯಕೀಯ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳು, ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಗಳ ಬಗ್ಗೆ ಮೂಲಭೂತ ಭೌತಿಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಹಾಗೂ ಶೈಕ್ಷಣಿಕ/ ಸೇವಾ ಮಟ್ಟವನ್ನು ಉತ್ತಮ-ಗೊಳಿಸಲು Compressive Plan ರಚಿಸಿ ಮಂಡಿಸುವ ಬಗ್ಗೆ. | ಸಂಸ್ಥೆಗೆ ಅಗತ್ಯವಿರುವ ಮೂಲಭೂತ ಭೌತಿಕ ಸೌಲಭ್ಯಗಳ ಅಗತ್ಯತೆ ಮತ್ತು ಶೈಕ್ಷಣಿಕ / ಸೇವಾ ಮಟ್ಟವನ್ನು ಉತ್ತಮಗೊಳಿಸುವ ಬಗ್ಗೆ ಮಾಹಿತಿಯನ್ನು Power point Presentation ಮೂಲಕ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಅಗತ್ಯತೆಗಳ ಬಗ್ಗೆ ಸರ್ಕಾರಕ್ಕೆ ಸಕಾಲದಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಿ ಮಂಜೂರಾತಿ ಪಡೆಯುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. |
| 2 | ಆಯವ್ಯಯಕ್ಕೆ ಅನುದಾನ ಪರಿಷ್ಕೃತ ಬೇಡಿಕೆಯ ಪ್ರಸ್ತಾವನೆ ಸಲ್ಲಿಸುವ ಕುರಿತಂತೆ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಿಬ್ಬಂದಿಗಳ ವೇತನ, ಹೊಸ ಆಸ್ಪತ್ರೆಗೆ ಉಪಕರಣಗಳ ಖರೀದಿ, ಗ್ರಂಥಾಲಯ ಪುಸ್ತಕ ಖರೀದಿ , ಮೂರನೇ ಹಂತದ ಕಟ್ಟಡ ಕಾಮಗಾರಿಗೆ 750ಹಾಸಿಗೆಗಳಿಗೆ ಕಟ್ಟಡ ನಿರ್ಮಾಣದ ಬಾಕಿ ಅನುದಾನ , STP ಕಾಮಗಾರಿಯ ಬಾಕಿ ಅನುದಾನ ಹಾಗೂ ಇತರೆ ಸಣ್ಣ ಪುಟ್ಟ ಕಾಮಗಾರಿಗೆ ಸಂಬಂಧಿಸಿದಂತೆ 2013-14ನೇ ಸಾಲಿನಲ್ಲಿ ಅಂದಾಜು ಮೊತ್ತ ರೂ.12,935.00 ಲಕ್ಷಗಳಿಗೆ ಅನುದಾನ ಅಗತ್ಯವಿರುತ್ತದೆಂದು ಅಂದಾಜು ಆಯಾವ್ಯಯ ಪಟ್ಟಿಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರತ್ತದೆ. ಆದರೆ 2013-14ನೇ ಸಾಲಿಗೆ ಈ ಸಂಸ್ಥೆಗೆ ರೂ.2666.68 ಅನುದಾನ ಮಾತ್ರ ಹಂಚಿಕೆಯಾಗಿರುತ್ತದೆ. ಮೇಲೆ ವಿವರಿಸಿರುವ ಎಲ್ಲಾ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಹೆಚ್ಚುವರಿಯಾಗಿ ರೂ.14,715.60ಲಕ್ಷಗಳು ಅಗತ್ಯವಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಪ್ರಸ್ತಾವನೆಗಳನ್ನು ಒಪ್ಪಿ ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನ ಬಿಡುಗಡೆ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು. |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರಮ ಸಂಖ್ಯೆ</th><th>ಅಜೆಂಡಾ</th><th>ತೀರ್ಮಾನ</th></tr>
<tr><td>3</td><td>ಭಾರತೀಯ ಮೆಡಿಕಲ್ ಕೌನ್ಸಿಲ್ ಮಾರ್ಗ ಸೂಚಿಯನ್ವಯ ಹುದ್ದೆಗಳನ್ನು ಸೃಜಿಸುವ ಹಾಗೂ ನೇಮಕಾತಿ ಬಗ್ಗೆ.</td><td>ಭಾರತೀಯ ವೈದ್ಯಕೀಯ ಪರಿಷತ್ತಿನ ಮಾರ್ಗಸೂಚಿಯನ್ವಯ 100 ರಿಂದ 150 ಎಮ್.ಬಿ.ಬಿ.ಎಸ್.ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸುವ ಹಾಗೂ ನೇಮಕಾತಿ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿ ಅಂಗೀಕರಿಸಲಾಯಿತು.
<table>
<tr><th>ಕ್ರ. ಸಂ.</th><th>150 ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಮಂಜೂರು ಮಾಡಬೇಕಾಗಿರುವ ಹುದ್ದೆಗಳು</th><th>ಹುದ್ದೆಗಳ ಸಂಖ್ಯೆ</th><th>ಒಂದು ಹುದ್ದೆಗೆ ತಗಲುವ ವಾರ್ಷಿಕ ವೆಚ್ಚ</th><th>ಒಟ್ಟು ಹುದ್ದೆಗಳಿಗೆ ತಗಲುವ ವೆಚ್ಚ</th></tr>
<tr><td>1</td><td>ಅಸೋಸಿಯೇಟ್ ಪ್ರೊಫೆಸರ್</td><td>09</td><td>17,50,176.00</td><td>1,57,51,584.00</td></tr>
<tr><td>2</td><td>ಅಸಿಸ್ಟೆಂಟ್ ಪ್ರೊಫೆಸರ್</td><td>04</td><td>7,73,160.00</td><td>30,92,064.00</td></tr>
<tr><td>3</td><td>ಸೀನೀಯರ್ ರೆಸಿಡೆಂಟ್ಸ್</td><td>28</td><td>5,67,744.00</td><td>1,58,96,832.00</td></tr>
<tr><td>4</td><td>ಟ್ಯೂಟರ್ಸ್ / ಜ್ಯೂನಿಯರ್ ರೆಸಿಡೆಂಟ್ಸ್</td><td>23</td><td>3,72,000.00</td><td>85,56,000.00</td></tr>
</table></td></tr>
<tr><td>4</td><td>ಸರ್ಕಾರದಿಂದ ಮಂಜೂರಾದ ಹುದ್ದೆಗಳ ವಿವರಗಳು, ಖಾಲಿ ಇರುವ ಹುದ್ದೆಗಳು, ಹೊಸದಾಗಿ ಸೃಜಿಸಲು ಆರ್ಥಿಕ ಇಲಾಖೆಯಿಂದ ಸಹಮತಿ ಪಡೆಯಲು ಸಲ್ಲಿಸಿರುವ ಪ್ರಸ್ತಾವನೆಗಳ ಬಗ್ಗೆ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳು, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳ ಅಂಕಿ-ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಆರ್ಥಿಕ ಇಲಾಖೆಯಿಂದ ಸಹಮತಿ ಪಡೆಯಲು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಒಪ್ಪಿ ಅಂಗೀಕರಿಸಲಾಯಿತು.
<table>
<tr><th>ಕ್ರ.ಸಂ.</th><th>ಪದನಾಮ</th><th>ವೇತನ ಶ್ರೇಣಿ</th><th>ಮಾಸಿಕ ವೇತನ</th><th>ವಾರ್ಷಿಕ ವೇತನ</th></tr>
<tr><td>01</td><td>ಕಛೇರಿ ಅಧೀಕ್ಷಕರು :04</td><td>20000-36300</td><td>80,000-00</td><td>9,60,000-00</td></tr>
<tr><td>02</td><td>ಬಯೋಮೆಡಿಕಲ್ ಇಂಜಿನಿಯರ್ :01</td><td>20000-36300</td><td>20,000-00</td><td>2,40,000-00</td></tr>
<tr><td>03</td><td>ಫಾರ್ಮಾಸಿಸ್ಟ್ :10</td><td>14550-26700</td><td>1,45,500-00</td><td>17,46,000-00</td></tr>
<tr><td colspan="4">ಒಟ್ಟು</td><td>29,46,000-00</td></tr>
</table>
750 ಹಾಸಿಗೆ ಸಾಮರ್ಥ್ಯದ ಹೊಸ ಕಟ್ಟಡದ ಕಾಮಗಾರಿಯು ಪೂರ್ಣಗೊಂಡಿರುವುದರಿಂದ ಆಸ್ಪತ್ರೆ ನಿರ್ವಹಣೆಗಾಗಿ ಅತಿ ಅವಶ್ಯಕವಿರುವ ಕೆಳಕಂಡ ಹುದ್ದೆಗಳನ್ನು ಮಂಜೂರಾತಿ ಮತ್ತು ಆರ್ಥಿಕ ಇಲಾಖೆಯ ಸಹಮತಿ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ತೀರ್ಮಾನಿಸಲಾಯಿತು.
<table>
<tr><th>ಕ್ರ.ಸಂ.</th><th>ಪದನಾಮ</th><th>ಹುದ್ದೆಗಳ ಸಂಖ್ಯೆ</th><th>ವೇತನ ಶ್ರೇಣಿ</th></tr>
<tr><td>1</td><td>ಶುಶ್ರೂಷರು</td><td>150</td><td>17650-32000</td></tr>
</table></td></tr>
</table>



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

<table>
<tr><th>ಕ್ರಮ ಸಂಖ್ಯೆ</th><th>ಅಜೆಂಡಾ</th><th>ತೀರ್ಮಾನ</th></tr>
<tr><td></td><td></td><td>
<table>
<tr><td>2</td><td>ಗ್ರೂಪ್ `ಡಿ`</td><td>200</td><td>9600-14550</td></tr>
<tr><td>3</td><td>ಓ.ಟಿ. ಟೆಕ್ನೀಷಿಯನ್</td><td>10</td><td>14550-26700</td></tr>
<tr><td>4</td><td>ಡಯಾಲಿಸಿಸ್ ಟೆಕ್ನೀಷಿಯನ್</td><td>10</td><td>14550-26700</td></tr>
<tr><td>5</td><td>ಶುಶ್ರೂಷಕ ಅಧೀಕ್ಷಕರು-I</td><td>01</td><td>24000-45300</td></tr>
<tr><td>6</td><td>ಶುಶ್ರೂಷಕ ಅಧೀಕ್ಷಕರು-II</td><td>01</td><td>22800-43200</td></tr>
</table>
</td></tr>
<tr><td>5</td><td>ಸರ್ಕಾರಕ್ಕೆ ಸಲ್ಲಿಸಲ್ಪಟ್ಟಿರುವ ಬಾಕಿಯಿರುವ ಪ್ರಸ್ತಾವನೆಗಳ ವಿವರಗಳ ಬಗ್ಗೆ.</td><td>
<table>
<tr><th>ಕ್ರಮ ಸಂಖ್ಯೆ</th><th>ವಿವರ</th><th>ತೀರ್ಮಾನ</th></tr>
<tr><td>1</td><td>3ನೇ ಹಂತದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಾಮಗಾರಿಗಳ ವಿವರ Construction of Resident Doctor`s Quarters/ Nursing Quarters/Examination Hall and Staff Rooms/ Providing Auditorium Roof Truss and Acoustics for Lecture Hall and Auditorium / Interior sound system Lightings/Sitting arrangements and Street Lights / Construction of CEO`s and Medical Superintendent Residential Quarters/ All round compound / Roads and Drains / IMA Building compensation/ Renovation works of Existing CEO`s Quarters for converting HIMS, Director`s Quarters/ Renovation works of existing DS Quarters /Land scaping works of HIMS campus/ Rain Water Harvesting</td><td>ದಿನಾಂಕ:16-07-2009 ರ 3ನೇ ಆರ್ಥಿಕ ಸಮಿತಿ ಸಭೆ ಮತ್ತು ದಿನಾಂಕ: 04-08-2009 ಆಡಳಿತ ಮಂಡಳಿ ತೀರ್ಮಾನದಂತೆ 3ನೇ ಹಂತದಲ್ಲಿ ಉದ್ದೇಶಿಸಿರುವ ಕಟ್ಟಡ ಕಾಮಗಾರಿಗಳನ್ನು ನಿರ್ಮಾಣ ಮಾಡಲು ಮುಖ್ಯ ಅಭಿಯಂತರರು ಸಂಪರ್ಕ ಮತ್ತು ಕಟ್ಟಡಗಳು ದಕ್ಷಿಣ ಬೆಂಗಳೂರುರವರು ರೂ.3,500ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ನಕ್ಷೆಗಳೊಂದಿಗೆ ದಿನಾಂಕ:29-09-2009 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಉದ್ದೇಶಿತ ಕಾಮಗಾರಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡುವಂತೆ ದಿನಾಂಕ: 10-11-2009, 05-01-2010, 17-06-2010, 27-09-2010, 06-09-2011, 19-07-2012, ಮತ್ತು 18-04-2013ರಂದು ಸರ್ಕಾರಕ್ಕೆ ಪತ್ರ</td></tr>
</table>
</td></tr>
</table>



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ | | |
|---|---|---|---|---|
| | | | works / Fire Exists/ Fire Detectors/ Protectors works/ Tender Premium / Price Escalation and Miscellaneous and Un foreseen charges | ಬರೆಯಲಾಗಿದ್ದರೂ ಸಹ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ-ಯಾಗಿರುವುದಿಲ್ಲ.<br>ಉದ್ದೇಶಿತ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯವರು 2009ನೇ ಸಾಲಿನಲ್ಲಿ ರೂ.3,500.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು 3 ವರ್ಷಗಳು ಕಳೆದಿರುವುದರಿಂದ ಪ್ರಸ್ತುತ ಸಾಲಿನಲ್ಲಿ PWD, CSRದರಗಳು ಹೆಚ್ಚುವರಿಯಾಗಿ ಕಾಮಗಾರಿ ನಿರ್ಮಾಣ ವೆಚ್ಚವು ರೂ.4,500.00 ಲಕ್ಷಗಳಿಗೆ ಏರಿಕೆಯಾಗಿರುತ್ತದೆಂದು ಲೋಕೋಪಯೋಗಿ ಇಲಾಖೆಯವರು ಸಲ್ಲಿಸಿರುವ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಕಾಮಗಾರಿಯ ಸಿ.ಎಸ್.ಆರ್. ದರಗಳು ಹೆಚ್ಚಿರುವುದನ್ನು ಒಪ್ಪಿ ರೂ.4,500.00 ಲಕ್ಷಗಳಿಗೆ ಅಂದಾಜು ವೆಚ್ಚವನ್ನು ಅಂಗೀಕರಿಸಲಾಯಿತು. ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಪುನ: ಸಲ್ಲಿಸುವುದೆಂದು ನಿರ್ಣಯ ಕೈಗೊಳ್ಳಲಾಯಿತು. |
| | | 2 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಘನ ತ್ಯಾಜ್ಯ ನೀರು ಶುದ್ಧೀಕರಣ ಘಟಕ ಸ್ಥಾಪಿಸುವ ಕಾಮಗಾರಿ. | ಹಿಮ್ಸ್ ಸಂಸ್ಥೆಯ ಆವರಣದಲ್ಲಿ ಘನ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡುವ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 12ಕೆವಿಎಂ2012(2), ಬೆಂಗಳೂರು, ದಿನಾಂಕ: 31-5-2012ರಂದು ರೂ.193.00 ಲಕ್ಷಗಳಿಗೆ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | | ಆಡಳಿತಾತ್ಮಕ ಅನುಮೋದನೆ ನೀಡಿ, ಸರ್ಕಾರದ ಆದೇಶ ಸಂಖ್ಯೆ: ಆಕುಕ 11 ಎಂಪಿಎಸ್ 2012, ಬೆಂಗಳೂರು ದಿನಾಂಕ: 31-3-2012 ರಂದು ರೂ.130.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಈಗಾಗಲೇ ಬಿಡುಗಡೆ ಮಾಡಿದ ಮೊತ್ತವನ್ನು ದಿನಾಂಕ: 13-06-2012 ರಂದು ಕ.ನ.ನಿ ಮತ್ತು ಒ.ಚ.ಮ. ಹಾಸನರವರಿಗೆ ರೂ.130.00 ಲಕ್ಷಗಳನ್ನು ಡೆಪಾಸಿಟ್ ಮಾಡಲಾಗಿದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, "ಕಾಮಗಾರಿಯ ವೆಚ್ಚ ಹೆಚ್ಚಾದುದರಿಂದ ರೂ.193.00ಲಕ್ಷಗಳಿಗೆ ಬದಲಾಗಿ ಪರಿಷ್ಕೃತ ಅಂದಾಜು ಮೊತ್ತ ರೂ .245.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ.115.00ಲಕ್ಷಗಳನ್ನು ಬಿಡುಗಡೆ ಮಾಡುವಂತೆ ದಿನಾಂಕ: 10-06-2013 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 3 | ಹಿಮ್ಸ್ ಸಂಸ್ಥೆಯ ಬೋಧನಾ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯನ್ನು 350 ರಿಂದ 750 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಅವಶ್ಯಕ ಹೆಚ್ಚುವರಿ ಕಾಮಗಾರಿಗಳ ನಿರ್ಮಾಣಕ್ಕೆ ರೂ.550.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ | ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯನ್ನು 350-750 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ನೂತನ ಕಟ್ಟಡದ ನಿರ್ಮಾಣ ಕಾಮಗಾರಿಯು ಮುಗಿದಿದ್ದು ಈ ಆಸ್ಪತ್ರೆಯನ್ನು ಸಾರ್ವಜನಿಕ ರೋಗಿಗಳ ಉಪಯೋಗಕ್ಕೆ ಒದಗಿಸಲು ಹೊಸ ಕಟ್ಟಡದ ಅವಶ್ಯಕತೆಗೆ ಬಾಕಿ ಇರುವ ಕಾಮಗಾರಿಗಳಾದ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | ಮಾಡಲು ಸಲ್ಲಿಸಿರುವ ಪ್ರಸ್ತಾವನೆಗಳು | 1. Air conditioning<br>2. Fire protection<br>3. Peripheral road and drain<br>4. Sump & pumping machinery<br>5. Rain water harvesting<br>6. Balance 4 bed lifts<br>7. Oxygen gas lines & DG connections.<br>ಈ ಮೇಲ್ಕಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೆ.ಹೆಚ್.ಎಸ್. ಡಿ.ಆರ್.ಪಿ. ವಿಭಾಗ ಮೈಸೂರುರವರು ರೂ.550.00 ಲಕ್ಷಗಳಿಗೆ ಹೊಸ ಪ್ರಸ್ತಾಪನೆ ಸಲ್ಲಿಸಿದ್ದು, ಈ ಪ್ರಸ್ತಾವನೆಯನ್ನು ದಿ:18-02-2013ರ 6ನೇ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಈ ಕಾಮಗಾರಿಗೆ ಆಡಳಿತ್ಮಾತಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡಲು ದಿನಾಂಕ:09-10-2012, 26-02-2013 ಮತ್ತು 27-04-2013 ರಂದು ಸರ್ಕಾರಕ್ಕೆ ಪತ್ರ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 4 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿದ್ಯಾರ್ಥಿನಿಲಯಗಳಿಗೆ ಹಾಗೂ ವೈದ್ಯರ ವಸತಿ ಗೃಹಗಳಿಗೆ ಕುಡಿಯುವ ನೀರಿನ ಸಂಗ್ರಹಣೆಗೆ ಹೆಚ್ಚುವರಿ ಟ್ಯಾಂಕ್ ನಿರ್ಮಿಸುವ ಬಗ್ಗೆ . | ಸಂಸ್ಥೆಯಲ್ಲಿ ನೀರಿನ ತೊಂದರೆ ತೀವ್ರವಾಗಿ ರುವುದರಿಂದ ಸಂಸ್ಥೆಯ ಕಾಮಗಾರಿ ಸಮಿತಿ ಸಭೆಯಲ್ಲಿ ಸಂಪ್ ನಿರ್ಮಾಣದ ಅವಶ್ಯಕತೆಯನ್ನು ಅನುಮೋದಿಸಿ, ಲೋಕೋಪಯೋಗಿ ಇಲಾಖೆ, ಹಾಸನರವರು ನೀಡಿದ್ದ ಅಂದಾಜು ಪಟ್ಟಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | | ರೂ.9.5 ಲಕ್ಷಗಳಿಗೆ ಅನುಮೋದನೆ ಪಡೆಯಲು ದಿನಾಂಕ: 17-02-2012 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ರವರಿಂದ ಅನುಮೋದನೆ ಪಡೆದು ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಗುತ್ತಿಗೆದಾರರಿಗೆ ಮೊದಲನೇ ಬಿಲ್ ಬಾಬ್ತು ರೂ.6,14,537.00ಗಳನ್ನು ದಿನಾಂಕ: 22-09-2012 ರಂದು ಪಾವತಿ ಮಾಡಲಾಗಿರುತ್ತದೆ. ಉಳಿಕೆ ಮೊತ್ತ ರೂ.3.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ದಿನಾಂಕ:23-02-2013ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 5 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಮಕ್ಕಳ ವಾರ್ಡಿನ ಪಕ್ಕದಲ್ಲಿ ಶಿಶು ಪೌಷ್ಟಿಕ ಪುನರ್ ವಸತಿ ಕೇಂದ್ರ ಸ್ಥಾಪಿಸುವ ಕಾಮಗಾರಿ. | ಹಿಮ್ಸ್ ಸಂಸ್ಥೆಯ ಮಕ್ಕಳ ವಾರ್ಡಿನ ಪಕ್ಕದ ಲಾಬಿ ಇರುವ ಸ್ಥಳದಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ ನಿಂದ ಶಿಶು ಪೌಷ್ಟಿಕ ಪುನರ್ ವಸತಿ ಕೇಂದ್ರ, ಅಡಿಗೆ ಮನೆ, ಸ್ಟೋರ್ ರೂಮ್ ನಿರ್ಮಿಸಲು ಉದ್ದೇಶಿಸಿದ್ದು, ಮೆಟ್ಟಿಲುಗಳ ಮುಂಭಾಗದ ಖಾಲಿ ಜಾಗದಲ್ಲಿ ಅಲ್ಯೂಮಿನಿಯಂ ಕೊಠಡಿಯನ್ನು ನಿರ್ಮಿಸಿ ಅದರಲ್ಲಿ ಮಕ್ಕಳ ಆಟದ ಸಾಮಾನುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.<br>ದಿನಾಂಕ:19-01-2013ರಂದು ರೂ.4.95ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | | ಮತ್ತು ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 6 | ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣಕ್ಕಾಗಿ ಅಡೆತಡೆರಹಿತ ವಾತಾವರಣವನ್ನು ನಿರ್ಮಿಸುವ ಕೆಲಸ (ರ‍್ಯಾಂಪ್ ಕೆಲಸ). | ಎಲ್ಲಾ ಸರ್ಕಾರಿ ಪ್ರಮುಖ ಕಛೇರಿಗಳಲ್ಲಿ ಅಂಗವಿಕಲ ವ್ಯಕ್ತಿಗಳಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರದ SIPDA ಯೋಜನೆಯಡಿ ಅಡೆತಡೆ ರಹಿತ ವಾತಾವರಣವನ್ನು ನಿರ್ಮಿಸಲು<br>Recurring Staff Salary 4.10<br>Non Recurring:-<br>a) Equipment- 23.50<br>b) Civil Work- 9.30<br>c) Furniture- 1.00<br>**ಒಟ್ಟು ಮೊತ್ತ= 37.90**<br>ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ಮತ್ತು ಅನುದಾನವನ್ನು ಬಿಡುಗಡೆ ಮಾಡಲು ದಿನಾಂಕ: 05-01-2013 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 7 | 350 ರಿಂದ 750 ಹಾಸಿಗೆಗಳ ನೂತನ ಕಟ್ಟಡ ಮತ್ತು ಕಾಲೇಜು ಕಟ್ಟಡದ ಮಧ್ಯೆ ಇರುವ ಎಲೆಕ್ಟ್ರಿಕಲ್ ಪೋಲ್ಸ್ ಸ್ಥಳಾಂತರಗೊಳಿಸುವ ಕಟ್ಟಡ ಕಾಮಗಾರಿ. | ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯನ್ನು 350-750 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ನೂತನ ಕಟ್ಟಡದ ನಿರ್ಮಾಣ ಕಾಮಗಾರಿಯು ಮುಗಿದಿದ್ದು ಆಸ್ಪತ್ರೆ ಮತ್ತು ಕಾಲೇಜು ಕಟ್ಟಡದ ನಡುವೆ ಸಂಪರ್ಕ ಕಲ್ಪಿಸಲು ಮಧ್ಯದಲ್ಲಿ ವಿದ್ಯುತ್‌ಚ್ಛಕ್ತಿ ಸ್ಥಾವರದ ಮೈನ್ ಲೈನ್ ಸ್ಥಳಾಂತರಗೊಳಿಸಲು |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | | ತಗಲುವ ವೆಚ್ಚದ ಬಾಬ್ತನ್ನು ಹಿಮ್ಸ್ ಸಂಸ್ಥೆಯೇ ಭರಿಸಬೇಕಾಗಿರುತ್ತದೆ. ಈ ಕಛೇರಿ ಪತ್ರ ಸಂಖ್ಯೆ: ಹಿಮ್ಸ್/ ಕಾಮಗಾರಿ(ವಿದ್ಯುತ್)01/2012-13, ದಿನಾಂಕ:18-01-2013ರಂದು ರೂ.7,55,076-00ಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ಮತ್ತು ಅನುದಾನವನ್ನು ಬಿಡುಗಡೆ ಮಾಡಲು ದಿನಾಂಕ: 08-01-2013 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ಮೇಲೆ ವಿವರಿಸಿದ ಕಾಮಗಾರಿಗಳು ಹಾಗೂ ಇತರೆ ವಿದ್ಯುತ್ ಕೆಲಸಗಳು ಸೇರಿದಂತೆ ಪರಿಷ್ಕೃತ ರೂ.20,30,000.00ಗಳಿಗೆ ಅಂದಾಜು ಪಟ್ಟಿಯನ್ನು ಚೆಸ್ಕಾಂರವರು ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 8 | ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಮತ್ತು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಚನ್ನಪಟ್ಟಣ ಕೆರೆಯ ಅಚ್ಚುಕಟ್ಟಿನಿಂದ ನೀರು ಸರಬರಾಜು ಮಾಡುವ ಕಾಮಗಾರಿ. | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ ನಿತ್ಯ ಬಳಕೆಗೆ ಹಾಸನ ನಗರದ ಸಭೆಯಿಂದ ನೀರು ಸಮರ್ಪಕವಾಗಿ ಸರಬರಾಜಗದ ಕಾರಣದಿಂದ ನೀರಿನ ತೊಂದರೆ ಉಂಟಾಗಿದ್ದು ಆಸ್ಪತ್ರೆಯ ರೋಗಿಗಳಿಗೆ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಶಾಶ್ವತವಾಗಿ ನೀರಿನ ತೊಂದರೆ ನಿವಾರಿಸಲು ಹಾಸನದ ಚನ್ನಪಟ್ಟಣ ಕೆರೆಯ ಅಚ್ಚುಕಟ್ಟಿನಿಂದ ಕೊಳವೆಬಾವಿ ಮುಖಾಂತರ ನೀರು ಸರಬರಾಜು ಮಾಡುವ ಕಾಮಗಾರಿಗೆ ಲೋಕೋಪಯೋಗಿ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | | ಇಲಾಖೆ, ಹಾಸನರವರು ದಿನಾಂಕ:18-01-2013 ರಂದು ಸಲ್ಲಿಸಿದ್ದ ರೂ.30.00 ಲಕ್ಷಗಳ ಅಂದಾಜು ಪಟ್ಟಿಯನ್ನು ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆಗಾಗಿ ದಿನಾಂಕ: 19-01-2013ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 9 | ಸಂಸ್ಥೆಯ ಕಾಲೇಜು ಆವರಣದಲ್ಲಿರುವ ಆಟದ ಮೈದಾನಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸುವ ಬಗ್ಗೆ. | ಸಂಸ್ಥೆಯ ಕಾಲೇಜು ಆವರಣದಲ್ಲಿರುವ ಆಟದ ಮೈದಾನದ ಪಶ್ಚಿಮ ಭಾಗದಲ್ಲಿ ಹಳೆಯ ಕಾಂಪೌಂಡ್ ಗೋಡೆ ಬಿದ್ದು ಹೋಗಿರುವುದರಿಂದ 172ಮೀಟರ್ ಉದ್ದದ ಕಾಂಪೌಂಡ್ ಗೋಡೆಯನ್ನು ನಿರ್ಮಿಸಲು ರೂ.7.36 ಲಕ್ಷಗಳಿಗೆ ಅಂದಾಜು ಪಟ್ಟಿ ಮತ್ತು ಆವರಣದ ಸುತ್ತಲೂ ಇರುವ ಕಾಂಪೌಂಡ್ ಗೋಡೆಯು ಹಾಳಾಗಿರುವ ಭಾಗವನ್ನು ದುರಸ್ಥಿಗೊಳಿಸಿ ಪೂರ್ವ ಭಾಗದ 125ಮೀಟರ್ ಉದ್ದದ ಕಾಂಪೌಂಡ್ ಗೋಡೆಯನ್ನು ಪುನರ್ ನಿರ್ಮಿಸಲು ರೂ.4.90 ಲಕ್ಷಗಳಿಗೆ ಲೋ.ಬಂ& ಒ.ಜ. ಸಾರಿಗೆ ಇಲಾಖೆ, ಹಾಸನರವರು ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ. ಈ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡಲು ದಿನಾಂಕ: 15-02-2013 ಮತ್ತು 27-04-2013ರಂದು ಅಂದಾಜು ಪಟ್ಟಿ ಮತ್ತು ನಕ್ಷೆಯ ಒಪ್ಪಿಗೆಗಾಗಿ ಸರ್ಕಾರಕ್ಕೆ ಪತ್ರ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ | | |
|---|---|---|---|---|
| | | 10 | ಸಂಸ್ಥೆಯ ಆಸ್ಪತ್ರೆಯ ವಾಟರ್ ಟ್ಯಾಂಕ್ ಹಿಂಭಾಗದ ರಸ್ತೆಗಳನ್ನು ರಿಪೇರಿ ಅಥವಾ ಹೊಸ ರಸ್ತೆ ನಿರ್ಮಾಣ ಮಾಡುವ ಕಾಮಗಾರಿ. | ಸಂಸ್ಥೆಯ ಆಸ್ಪತ್ರೆಯ ವಾಟರ್ ಟ್ಯಾಂಕ್ ಹಿಂಭಾಗದ ರಸ್ತೆಗಳು ಹಾಳಾಗಿದ್ದು ಸದರಿ ರಸ್ತೆಯನ್ನು ರಿಪೇರಿ ಮಾಡಿಕೊಡಲು ಅಥವಾ ರಿಪೇರಿ ಸಾಧ್ಯವಾಗದಿದ್ದಲ್ಲಿ ಹೊಸ ರಸ್ತೆ ಮಾಡಿಕೊಡಲು 2012-13ನೇ ಸಾಲಿನ ದರಪಟ್ಟಿಯಂತೆ ಲೋ.ಬಂ.&ಒ.ಜ.ಸಾರಿಗೆ ಇಲಾಖೆ, ಹಾಸನರವರು ರೂ.20.00 ಲಕ್ಷಗಳಿಗೆ ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ. ಈ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ದಿನಾಂಕ: 15-02-2013 ಮತ್ತು 12-04-2013 ರಂದು ಅಂದಾಜು ಪಟ್ಟಿ ಮತ್ತು ಪತ್ರವನ್ನು ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| | | 11 | ಹಿಮ್ಸ್ ಕಾಲೇಜು ಕಟ್ಟಡಕ್ಕೆ ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡುವ ಕಾಮಗಾರಿ. | ಸಂಸ್ಥೆಯು ಪ್ರಸ್ತುತ ಎದುರಿಸುತ್ತಿರುವ ಮತ್ತು ಭವಿಷ್ಯದಲ್ಲಿ ಎದುರಿಸಬೇಕಾದ ನೀರಿನ ಸಮಸ್ಯೆ -ಯನ್ನು ಸಮರ್ಥವಾಗಿ ಪರಿಹರಿಸಿಕೊಳ್ಳುವ ದೃಷ್ಟಿಯಿಂದ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ದೃಷ್ಟಿಯಿಂದ ನಿರ್ದೇಶಕರು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು ರವರು ಸಲ್ಲಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.9,10,276.00 ವೆಚ್ಚಕ್ಕೆ ದಿನಾಂಕ: 18-02-2013ರ 6ನೇ ಆರ್ಥಿಕ ಸಮಿತಿ ಸಭೆ -ಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ. |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | | ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 12 | ಸಂಸ್ಥೆಯ ಅಧಿನದಲ್ಲಿ ಬರುವ ಸರ್ಕಾರಿ ಶುಶ್ರೂಷೆ ಮಹಾವಿದ್ಯಾಲಯ, ಹಾಸನ ಇಲ್ಲಿಗೆ 62.5 KV ವಿದ್ಯುತ್ ಜನರೇಟರ್ ಖರೀದಿಸಿ ಅಳವಡಿಸುವ ಬಗ್ಗೆ. | ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹಾಸನ ಇಲ್ಲಿಗೆ ವಿಶ್ವವಿದ್ಯಾಲಯದ ಪರೀಕ್ಷೆ ವೇಳೆಯಲ್ಲಿ ನಿರಂತರ ವಿದ್ಯುತ್ ಸರಬರಾಜು ಅಗತ್ಯ ಇರುವುದರಿಂದ ಹಾಗೂ ರಾತ್ರಿ ವೇಳೆಯಲ್ಲಿ ವಿದ್ಯಾರ್ಥಿನಿಲಯಗಳಿಗೆ ವಿದ್ಯುತ್ ನಿಲುಗಡೆ ಸಮಯದಲ್ಲಿ ವಿದ್ಯುತ್ ಸರಬರಾಜು ಅಗತ್ಯ ಇರುವುದರಿಂದ 62.5ಕೆ.ವಿ ವಿದ್ಯುತ್ ಜನರೇಟರ್‌ಅನ್ನು ಡಿ.ಜಿ.ಎಸ್&ಡಿ ದರದಲ್ಲಿ ಖರೀದಿಸಲು ದಿನಾಂಕ:18-02-2013 ರ 6ನೇ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ. ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 13 | ಸಂಸ್ಥೆಯ ಬೋಧಕ ಆಸ್ಪತ್ರೆಯಾದ ಶ್ರೀ ಚಾಮ ರಾಜೇಂದ್ರ ಜಿಲ್ಲಾ ಆಸ್ಪತ್ರೆಯ 750 ಹಾಸಿಗೆಯ ನೂತನ ಕಟ್ಟಡಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳ ಖರೀದಿಯ ಅಂದಾಜು ಮೊತ್ತ ರೂ.3,000-00 ಲಕ್ಷಗಳಿಗೆ E-ಟೆಂಡರ್ ಕರೆಯಲು ಮತ್ತು ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ. | 13ನೇ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದಿರುವಂತೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯ ನೂತನ ಕಟ್ಟಡ ಕಾಮಗಾರಿಯು ಮುಗಿಯುವ ಹಂತದಲ್ಲಿರುತ್ತದೆ. ಈ ನೂತನ ಆಸ್ಪತ್ರೆಗೆ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ವಿಭಾಗವಾರು ಅಗತ್ಯವಿರುವ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

<table>
<tr><th>ಕ್ರಮ ಸಂಖ್ಯೆ</th><th>ಅಜೆಂಡಾ</th><th>ತೀರ್ಮಾನ</th></tr>
<tr><td></td><td></td><td>ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಖರೀದಿಸಲು ಅಂದಾಜು ರೂ.3,000-00 ಲಕ್ಷಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನವನ್ನು ಲೆಕ್ಕ ಶೀರ್ಷಿಕೆ4210-03-105-01-02-386(ಯೋಜನೆ)ಅಡಿಯಲ್ಲಿ ಬಿಡುಗಡೆ ಮಾಡುವ ಬಗ್ಗೆ ಸಂಖ್ಯೆ:ಹಿಮ್ಸ್/ಟಿ.ಎಸ್/(Inst-Fur)/08/2012-13, ದಿನಾಂಕ: 06-08-2012 ಮತ್ತು ದಿನಾಂಕ: 23-03-2013 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.</td></tr>
<tr><td>6</td><td>ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಉತ್ತಮ ವೈದ್ಯಕೀಯ ಸೇವೆಯನ್ನು ನೀಡಲು ಅದರಲ್ಲೂ ಹೈಟೆಕ್ ವೈದ್ಯಕೀಯ ಸೌಲಭ್ಯಗಳು ಜನಸಾಮಾನ್ಯರಿಗೆ ಕಡಿಮೆ ವೆಚ್ಚದಲ್ಲಿ ತಲುಪಿಸುವ ವಿನೂತನ ಯೋಜನೆಗಳ ಬಗ್ಗೆ .</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಾರ್ವನಿಕರಿಗೆ ಹೈಟೆಕ್ ವೈದ್ಯಕೀಯ ಸೌಲಭ್ಯಗಳನ್ನು ಜನಸಾಮಾನ್ಯರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ BARC, Mumbai ಇವರಿಂದ ಅನುದಾನವನ್ನು ಪಡೆದು ಈಗಾಗಲೇ ಕ್ಯಾನ್ಸರ್ ಘಟಕವನ್ನು PPP ಯೋಜನೆಯಡಿಯಲ್ಲಿ (HCG) ಸ್ಥಾಪಿಸಿದ್ದು, ಜುಲೈ ಮಾಹೆಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಅರ್ಪಿಸಲಾಗುವುದು. ಸಂಸ್ಥೆಯಿಂದ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸುವ ಉದ್ದೇಶದಿಂದ ಈಗಾಗಲೇ ಭಾರತೀಯ ವೈದ್ಯಕೀಯ ಪರಿಷತ್, ನವ ದೆಹಲಿ ಇವರಿಗೆ ಅರ್ಜಿ ಸಲ್ಲಿಸಿದ್ದು, ಸ್ನಾತಕೋತ್ತರ ಪದವಿ ಪ್ರಾರಂಭವಾಗುವ ಮುಂಚೆ ಈ ಕೆಳಗೆ ನಮೂದಿಸಿರುವ ವೈದ್ಯಕೀಯ ಉಪಕರಣಗಳು ಮತ್ತು ಸೂಪರ್ ಸ್ಪೆಷಾಲಿಟಿ ಸೌಲಭ್ಯಗಳನ್ನು ಸರ್ಕಾರವು ಮಂಜೂರಾತಿ ನೀಡಿದಲ್ಲಿ ಜನ ಸಾಮಾನ್ಯರಿಗೆ ಇನ್ನೂ ಉತ್ತಮವಾದ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆಂಬುದನ್ನು ಚರ್ಚಿಸಿ ಒಪ್ಪಿ ಅಂಗೀಕರಿಸಲಾಯಿತು.
<table>
<tr><th>ಕ್ರಮ ಸಂಖ್ಯೆ</th><th>ವೈದ್ಯಕೀಯ ಉಪಕರಣಗಳು</th><th>ಅಂದಾಜು ವೆಚ್ಚ (ಲಕ್ಷಗಳಲ್ಲಿ)</th></tr>
<tr><td>1</td><td>C.T. Scanning</td><td>300.00</td></tr>
<tr><td>2</td><td>M.R.I. Scanning</td><td>600.00</td></tr>
<tr><td></td><td>ಒಟ್ಟು</td><td>900.00</td></tr>
</table></td></tr>
</table>



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

<table>
<tr><th>ಕ್ರಮ ಸಂಖ್ಯೆ</th><th>ಅಜೆಂಡಾ</th><th>ತೀರ್ಮಾನ</th></tr>
<tr><td></td><td></td><td>

| ಕ್ರಮ ಸಂಖ್ಯೆ | ಸೂಪರ್ ಸ್ಪೆಷಾಲಿಟಿ ವಿಭಾಗ | ಅಂದಾಜು ವೆಚ್ಚ (ಲಕ್ಷಗಳಲ್ಲಿ) |
|---|---|---|
| 1 | Neurology | 100.00 |
| 2 | Urology | 100.00 |
| 3 | Nephrology | 100.00 |
| 4 | Cardiology | 100.00 |
| | ಒಟ್ಟು | **400.00** |

</td></tr>
<tr><td>7</td><td>ಪ್ರೊಫೆಸರ್ ಹುದ್ದೆಗಳ ಅಂತಿಮ ಜೇಷ್ಠತಾ ಪಟ್ಟಿ ಬಗ್ಗೆ.</td><td>ಸಂಸ್ಥೆಯಲ್ಲಿನ ಪ್ರೊಫೆಸರ್ ಹುದ್ದೆಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡಿರುವುದಿಲ್ಲ. ಸಂಸ್ಥೆಯಲ್ಲಿನ ವಿಭಾಗಾವಾರು ಹುದ್ದೆಗಳಿಗೆ ಅನುಗುಣವಾಗಿ ತಾತ್ಕಾಲಿಕ ಪಟ್ಟಿಯನ್ನು ದಿನಾಂಕ:16.10.2012ರಲ್ಲಿ ಪ್ರಕಟಣೆ ಮಾಡಿದ್ದು, ದಿನಾಂಕ:02.05.2013 ರಂದು ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಆದರೆ ಈ ಪ್ರಕಟಣೆ ಪಟ್ಟಿ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಈ ಜೇಷ್ಠತಾ ಪಟ್ಟಿಗೆ ತಡೆಯಾಜ್ಞೆಯನ್ನು ಉಚ್ಛ ನ್ಯಾಯಾಲಯವು ನೀಡಿರುತ್ತದೆ. ಸರ್ಕಾರದ ಪತ್ರದಂತೆ ತಯಾರಿಸಲಾಗಿರುವ ಸಂಸ್ಥೆಯ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನುಹಿಮ್ಸ್/ಸಿ(1)/87/2012-13, ದಿನಾಂಕ:02-05-2013ರ ಒಪ್ಪಿ ಅಂಗೀಕರಿಸಲಾಯಿತು. Deleted</td></tr>
<tr><td>8</td><td colspan="2">ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.</td></tr>
<tr><td>8(1)</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2013-14ನೇ ಸಾಲಿಗೆ ಇ-ಟೆಂಡರ್ ಮೂಲಕ ಭದ್ರತಾ ಸಿಬ್ಬಂದಿ, ಅನುರಿತ ಸ್ವಚ್ಛತಾ ಕಾರ್ಮಿಕರು ಮತ್ತು ಮೇಲ್ವಿಚಾರಕರ ಸೇವೆಯನ್ನು ಮೆ.ಸುರಕ್ಷಾ ಸೆಕ್ಯೂರಿಟಿ ಸರ್ವೀಸಸ್, ಹಾಸನ ಇವರಿಗೆ ಕಾರ್ಯಾದೇಶ ಜಾರಿಗೊಳಿಸಿರುವು-ದನ್ನು ಅನುಮೋದನೆ ಪಡೆಯುವ</td><td>ಎ)ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2013-14ನೇ ಸಾಲಿಗೆ ಅಗತ್ಯವಿರುವ ಮೇಲ್ವಿಚಾರಕರು : 30, ಭದ್ರತಾ ಸಿಬ್ಬಂದಿ : 65, ಸ್ವಚ್ಛತಾ ಕಾರ್ಮಿಕರು:150 ಒಟ್ಟು 245 ಕಾರ್ಮಿಕರನ್ನು ಹೊರಗುತ್ತಿಗೆ ಸಂಪನ್ಮೂಲದ ಮೂಲಕ ಪಡೆಯಲು ಈ ಕಚೇರಿಯ ಪತ್ರ ಸಂಖ್ಯೆ: ಹಿಮ್ಸ್/ಟಿ.ಎಸ್.(ಹೊ.ಗು)/06/12-13, ದಿನಾಂಕ:14-03-2013 ರಂದು ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪತ್ರಿಕಾ ಪ್ರಕಟಣೆ ಕರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯನ್ನು ಕೆ.ಟಿ.ಟಿ.ಪಿ. ಕಾಯ್ದೆ ಅನ್ವಯ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ನಿಯಮಗಳ ಅನುಸಾರ ನಿರ್ವಹಿಸಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಆರ್ಥಿಕವಾಗಿ ಉಳಿತಾಯವಾಗುವ ಮತ್ತು ಎಲ್-1 ಆಗಿರುವ ಮೆ. ಸುರಕ್ಷಾ ಸೆಕ್ಯೂರಿಟಿ ಸರ್ವೀಸಸ್, ಹಾಸನರವರಿಗೆ ದಿನಾಂಕ:01-05-2013 ರಿಂದ 30-04-2014 (12 ತಿಂಗಳ ಅವಧಿಗೆ) ಮಾಸಿಕ ರೂ.18,19,984.74 (ಸೇವಾ ಶುಲ್ಕ ಮತ್ತು ಸೇವಾ ತೆರಿಗೆ ಒಳಗೊಂಡಿರುತ್ತದೆ)ಗಳಿಗೆ ದಿನಾಂಕ: 30-04-2013 ರಂದು ಕಾರ್ಯಾದೇಶವನ್ನು ಜಾರಿಗೊಳಿಸಲಾಗಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.</td></tr>
</table>



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರಮ ಸಂಖ್ಯೆ</th><th>ಅಜೆಂಡಾ</th><th>ತೀರ್ಮಾನ</th></tr>
<tr><td></td><td>ಬಗ್ಗೆ.</td><td>ಬಿ) ಸರ್ಕಾರಿ ಶುಶ್ರೂಷಕ ಮಹಾ ವಿದ್ಯಾಲಯ, ಹಾಸನ ಈ ಸಂಸ್ಥೆಗೆ ಸೇರಿರುವುದರಿಂದ ಹೊರ ಗುತ್ತಿಗೆ ಸಂಪನ್ಮೂಲ ಟೆಂಡರ್ ನಿಬಂಧನೆಗಳ ಪ್ರಕಾರ ಶೇ.25 ರಷ್ಟು (62) ಕಾರ್ಮಿಕರನ್ನು ಹೆಚ್ಚಿಸಿ ತೆಗೆದುಕೊಳ್ಳಲು ಅವಕಾಶವಿರುವುದರಿಂದ ಈ ಕೆಳಗೆ ನಮೂದಿಸಿರುವ ಹುದ್ದೆಗಳಿಗೆ ಅನುಮೋದನೆ ನೀಡಲಾಯಿತು.
<table>
<tr><th>ಕ್ರಮ ಸಂಖ್ಯೆ</th><th>ಹುದ್ದೆಗಳ ಪದನಾಮ</th><th>ಹುದ್ದೆಗಳ ಸಂಖ್ಯೆ</th><th>ಅನುಮೋದಿಸಿದ ಹುದ್ದೆಗಳು</th></tr>
<tr><td>1</td><td>ಡ್ರೈವರ್ಸ್</td><td>3</td><td>3</td></tr>
<tr><td>2</td><td>ಪ್ಲಂಬರ್ಸ್</td><td>3</td><td>3</td></tr>
<tr><td>3</td><td>ಎಲೆಕ್ಟ್ರಿಷಿಯನ್</td><td>3 //</td><td>4 //</td></tr>
<tr><td>4</td><td>ಸೂಪರ್ ವೈಸರ್ಸ್</td><td>3</td><td>1</td></tr>
<tr><td>5</td><td>ಕಾರ್ಪೆಂಟರ್</td><td>1</td><td>1</td></tr>
<tr><td>6</td><td>ಸ್ವಚ್ಛತಾ ಕಾರ್ಮಿಕರು</td><td>49</td><td>13</td></tr>
</table>
8(1ಬಿ) 750 ಹಾಸಿಗೆಗಳ ಹೈಟೆಕ್ ಆಸ್ಪತ್ರೆಯು ಶೀಘ್ರವಾಗಿ ಪ್ರಾರಂಭವಾಗುವುದರಿಂದ ಈ ಆಸ್ಪತ್ರೆಯ ಭದ್ರತಾ ಮತ್ತು ಸ್ವಚ್ಛತಾ ಸೇವೆಗಾಗಿ 100 ಸಿಬ್ಬಂದಿಗಳ ಅವಶ್ಯಕತೆ ಇರುವುದರಿಂದ ಹೊರಗುತ್ತಿಗೆ ಮೇಲೆ ತೆಗೆದುಕೊಳ್ಳುವ ಬಗ್ಗೆ ಚರ್ಚಿಸಲಾಯಿತು ಆಸ್ಪತ್ರೆ ಪ್ರಾರಂಭಗೊಂಡ ನಂತರ ತೀರ್ಮಾನ ಕೈಗೊಳ್ಳುವುದೆಂದು ವಿಷಯವನ್ನು ಮುಂದೂಡಲಾಯಿತು.</td></tr>
<tr><td>8(2)</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಬೋಧಕ ಆಸ್ಪತ್ರೆಯ ಗಣಕ ಯಂತ್ರಗಳ ನಿರ್ವಹಣೆ ಮತ್ತು ನೆಟ್‌ವರ್ಕಿಂಗ್ ವ್ಯವಸ್ಥೆಗಾಗಿ 2013-14ನೇ ಸಾಲಿಗೆ ಇ-ಟೆಂಡರ್ ಕರೆಯುವ ಬಗ್ಗೆ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಗಣಕ ಯಂತ್ರಗಳ ಗಣಕೀಕರಣ ಮತ್ತು ವಿವಿಧ ತಂತ್ರಾಂಶಗಳ ಅಳವಡಿಕೆ ಮತ್ತು ನಿರ್ವಹಣೆಗಾಗಿ 2011-12ನೇ ಸಾಲಿಗೆ ಮ್ಯಾನ್ಯೂಯಲ್ ಟೆಂಡರ್ ಅನ್ನು ಸಂಖ್ಯೆ:ಹಿಮ್ಸ್/ಟಿ.ಎಸ್./07/10-11 ದಿನಾಂಕ:29-08-2011 ರಂದು ಕರೆಯಲಾಗಿತ್ತು. ಭಾಗವಹಿಸಿದ್ದ ಟೆಂಡರ್‌ದಾರರು ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದೆ ಸ್ಥಗಿತಗೊಂಡಿರುತ್ತದೆ. ಆದರೆ ಕೆ.ಟಿ.ಟಿ.ಪಿ. ಕಾಯ್ದೆ ಅನ್ವಯ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ನಿಯಮಗಳ ಅನುಸಾರ ಇ-ಟೆಂಡರ್ ಕರೆಯಬೇಕಾಗಿರುವುದರಿಂದ ಈ ಹಿಂದಿನ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ ಟೆಂಡರುದಾರರಿಗೆ ಇ.ಎಮ್.ಡಿ. ಮರುಪಾವತಿಸಿ ಹೊಸದಾಗಿ ಇ-ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು.</td></tr>
<tr><td>8(3)</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭದ್ರತಾ ಮತ್ತು ಸ್ವಚ್ಛತಾ ಸೇವೆಗಾಗಿ ಹೊರ ಸಂಪನ್ಮೂಲ ಏಜೆನ್ಸಿಯಾದ ಮೆ. ಸಾಯಿ ಸೆಕ್ಯೂರಿಟಿ ಏಜೆನ್ಸಿ, ಬೆಂಗಳೂರು ಇವರಿಗೆ ಕಛೇರಿ ಪತ್ರ ಸಂಖ್ಯೆ:ಹಿಮ್ಸ್/ಟಿ.ಎಸ್/22/2011-12, ದಿನಾಂಕ:11-05-2011ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಏಜೆನ್ಸಿಯ ಗುತ್ತಿಗೆ ಅವಧಿಯು ಮೇ-2012ರ ಅಂತ್ಯಕ್ಕೆ ಮುಕ್ತಾಯವಾಗಿದ್ದು ಸರ್ಕಾರದ ಅಧಿಸೂಚನೆಯಂತೆ ಇ-ಟೆಂಡರ್ ಪ್ರಕ್ಯೂರ್ ಮೆಂಟ್ ನಡೆಸಲು ಬೇಕಾದ</td></tr>
</table>



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | ಒಂದು ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ4(ಜಿ)ರಡಿ ಅನುಮತಿ ಪಡೆದಿರುವುದನ್ನು ಅನುಮೋದಿಸುವ ಬಗ್ಗೆ. | ಕಾಲಾವಕಾಶ ಹಾಗೂ ಸದರಿ ಏಜೆನ್ಸಿ ಇ-ಟೆಂಡರ್ ಪ್ರಕ್ರಿಯೆಗೆ ನ್ಯಾಯಾಲಯದಿಂದ ತಂದಂತಹ ಮಧ್ಯಂತರ ತಡೆಯಾಜ್ಞೆಗಳ ಹಿನ್ನೆಲೆಯಲ್ಲಿ ಸದರಿ ಏಜೆನ್ಸಿಯು ಮಾರ್ಚ್ -2013ರ ಅಂತ್ಯದ ವರೆಗೆ ಹೊರಗುತ್ತಿಗೆ ಸೇವೆಯನ್ನು ಸಲ್ಲಿಸಿರುತ್ತಾರೆ. ರೋಗಿಗಳ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಏಪ್ರಿಲ್ -2013ರ ಒಂದು ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಸರ್ಕಾರದ ಪತ್ರ ಸಂಖ್ಯೆ:ಆಇ 331 ವೆಚ್ಚ -12/13, ದಿನಾಂಕ:09-04-2013ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ಅನುಮತಿ ಪಡೆದು ಮೆ. ಸುರಕ್ಷ ಸೆಕ್ಯೂರಿಟಿ ಸರ್ವೀಸಸ್, ಹಾಸನ ಇವರಿಗೆ ತಾತ್ಕಾಲಿಕವಾಗಿ ಒಂದು ತಿಂಗಳ ಅವಧಿಗೆ ಕಾರ್ಯಾದೇಶ ನೀಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 8(4) | ಡಾ. ಆನಂದ್.ಡಿ. ಬೋಧಕರು, ದಂತ ಚಿಕಿತ್ಸಾ ವಿಭಾಗ ಇವರಿಗೆ ಎಂ.ಡಿ.ಎಸ್. ಸ್ನಾತ್ತಕೋತ್ತರ ಪದವಿಯ ವ್ಯಾಸಂಗಕ್ಕೆ ಆಯ್ಕೆಯಾಗಿ ರುವ ಬಗ್ಗೆ. | ಡಾ. ಆನಂದ್.ಡಿ., ಬೋಧಕರು, ದಂತ ಚಿಕಿತ್ಸಾ ವಿಭಾಗ ಇವರಿಗೆ ಎಂ.ಡಿ.ಎಸ್. ಸ್ನಾತ್ತಕೋತ್ತರ ಪದವಿಯ ವ್ಯಾಸಂಗಕ್ಕೆ ಆಯ್ಕೆಯಾಗಿರುವುದರಿಂದ ಸರ್ಕಾರದ ನಿಬಂಧನೆ ಹಾಗೂ ಷರತ್ತಿಗೆ ಒಳಪಟ್ಟು ಸಂಸ್ಥೆಯಿಂದ ಇವರನ್ನು ಉನ್ನತ ವ್ಯಾಸಂಗಕ್ಕೆ (In Service) ನಿಯೋಜಿಸ ಬಹುದೆಂದು ತೀರ್ಮಾನಿಸಲಾಯಿತು. |
| 8(5) | ಡಾ. ಹೆಚ್.ಸಿ. ಲೋಕೇಶ್, ಇವರನ್ನು ಖಾಯಂ ಹಿರಿಯ ಸ್ಥಾನಿಯ ವೈದ್ಯರನ್ನಾಗಿ ಸೇವೆಗೆ ಸೇರಿದ ದಿನಾಂಕದಿಂದಲೇ ಜಾರಿಗೆ ಬರುವಂತೆ ಅನುಮೋದನೆ ನೀಡುವ ಬಗ್ಗೆ. | ದಿನಾಂಕ:30-11-2010 ರಂದು ಕಡತ ಸಂಖ್ಯೆ:ಹಿಮ್ಸ್ /ಸಿ(2)/90/2010-11ರಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,(ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ಬೆಂಗಳೂರುರವರು ನೀಡಿರುವ ಆದೇಶವನ್ನು ಒಪ್ಪಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಆದೇಶ ದಿನಾಂಕ:30-11-2010ರಂತೆ ಸಭೆಯ ಮುಂದೆ ಮಂಡಿಸಿರುವ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚನೆ ನೀಡಿತು. |
| 8(6) | ಸಂಖ್ಯಾ ಶಾಸ್ತ್ರಜ್ಞರು/ ಸಹಾಯಕ ಉಪನ್ಯಾಸಕರು ಎಂಬ ಹುದ್ದೆಯನ್ನು ಸಂಖ್ಯಾ ಶಾಸ್ತ್ರಜ್ಞರು- ಕಮ್ - ಸಹಾಯಕ ಪ್ರಾಧ್ಯಾಪಕರೆಂದು ಮತ್ತು ವೈದ್ಯಕೀಯ ಸಾಮಾಜಿಕ ಕಾರ್ಯಕರ್ತರನ್ನು ಎಂ.ಎಸ್.ಡಬ್ಲ್ಯೂ | ಸಂಖ್ಯಾ ಶಾಸ್ತ್ರಜ್ಞರು/ಸಹಾಯಕ ಉಪನ್ಯಾಸಕರು ಎಂಬ ಹುದ್ದೆಯನ್ನು ಎಮ್.ಸಿ.ಐ. ನಿಯಮಾವಳಿ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಆಕುಕ 207 ಎಮ್.ಎಮ್.ಸಿ. 2006 ದಿನಾಂಕ: 19-05-2007ರ ಪ್ರಕಾರ ಸಂಖ್ಯಾ ಶಾಸ್ತ್ರಜ್ಞರು ಕಮ್ ಸಹಾಯಕ ಪ್ರಾಧ್ಯಾಪಕರು ಎಂದು ಪುನರ್ ನಾಮಕರಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.<br>ವೈದ್ಯಕೀಯ ಸಾಮಾಜಿಕ ಕಾರ್ಯಕರ್ತರ ವಿಷಯದಲ್ಲಿ ಸರ್ಕಾರಕ್ಕೆ ಇನ್ನೊಮ್ಮೆ ಸ್ಪಷ್ಟೀಕರಣಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಂಸ್ಥೆಯ ನಿರ್ದೇಶಕರಿಗೆ ಸೂಚನೆ ನೀಡಲು ಸಭೆಯು ತೀರ್ಮಾನಿಸಿತು. |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | ಕಮ್- ಸಹಾಯಕ ಪ್ರಾಧ್ಯಾಪಕರೆಂದು ಪುನರ್ ನಾಮಕರಣ ಮಾಡುವ ಬಗ್ಗೆ. | |
| 8(7) | ಡಾ. ಸತ್ಯ ನಾರಾಯಣ ಪ್ರಸಾದ್, ನಿವೃತ್ತ ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯಸ್ಥರು, ಅರವಳಿಕೆ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರನ್ನು ವಯೋನಿವೃತ್ತಿ ಪ್ರಯುಕ್ತ ಕರ್ತವ್ಯ ದಿಂದ ಬಿಡುಗಡೆ ಮಾಡಿರುವ ಬಗ್ಗೆ. | ಡಾ. ಸತ್ಯನಾರಾಯಣ ಪ್ರಸಾದ್, ನಿವೃತ್ತ ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯಸ್ಥರು, ಅರಿವಳಿಕೆ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರು ದಿನಾಂಕ:30.03.2013ಕ್ಕೆ KCSR ನಿಯಮ 95 ಮತ್ತು 284ರ ಹಾಗೂ ರಾಜ್ಯ ಸರ್ಕಾರದ ನಿಯಮಾವಳಿ ಪ್ರಕಾರ 60 ವರ್ಷ ವಯೋಮಿತಿ ತಲುಪಿರುವುದರಿಂದ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಹಿಮ್ಸ್/ಸಿ(1)/45/2012-13,ದಿನಾಂಕ:26-03-2013ರ ಪ್ರಕಾರ ದಿನಾಂಕ:30-03-2013ರ ಅಪರಾಹ್ನದಂದು ವಯೋನಿವೃತ್ತಿ ಪ್ರಯುಕ್ತ ಕರ್ತವ್ಯದಿಂದ ಬಿಡುಗಡೆ ಮಾಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 8(8) | ಹಿರಿಯ ಸ್ಥಾನಿಯ ವೈದ್ಯರು ವೇತನ ವ್ಯತ್ಯಾಸದ ಬಗ್ಗೆ. | ಈ ಸಂಸ್ಥೆಯ ಪ್ರಾರಂಭದಲ್ಲಿ ಡಿಪ್ಲೋಮ ಪದವೀಧರರಿಗೆ ಹಿರಿಯ ಸ್ಥಾನಿಯ ವೈದ್ಯರಾಗಿ ವೇತನ ಶ್ರೇಣಿ 10000-375-15200 ನೇಮಕಾತಿ ಮಾಡಲಾಗಿದೆ. ದಿನಾಂಕ:01-06-2007ರ AICTE ಪರಿಷ್ಕೃತ ವೇತನ ಶ್ರೇಣಿಯಲ್ಲಿ ಇವರಿಗೆ 8000-275-13500ರಡಿ ವೇತನ ನಿಗದಿಪಡಿಸಿದ್ದರಿಂದ ಈ ಶ್ರೇಣಿಯಲ್ಲಿ ಹಾಲಿ ಪಡೆಯುತ್ತಿದ್ದ ವೇತನ ಭದ್ರತೆಗೊಳಿಸಿ ನಿಗದಿಪಡಿಸಬೇಕಾಗಿದೆ. ಆದರೆ ಈ ಹಿಂದಿನ ವೇತನ ವ್ಯತ್ಯಾಸ ಡ್ರಾ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಆದೇಶ ಬಂದ ನಂತರ ಕ್ರಮವಹಿಸಿಲು ತೀರ್ಮಾನಿಸಲಾಯಿತು. |
| 8(9) | ಡಿಪ್ಲೋಮಾ ಪದವಿ ಹೊಂದಿದ ಹಿರಿಯ ಸ್ಥಾನಿಯ ವೈದ್ಯರು AGP 7,000-00 ನಿಗದಿಪಡಿಸಲು ಕೋರಿರುವ ಬಗ್ಗೆ. | ಸರ್ಕಾರಿ ಆದೇಶ ಸಂಖ್ಯೆ: 16-10-2012 ರ ಆದೇಶದಲ್ಲಿ ಖಾಯಂ ಬೋಧಕರು ಎಮ್.ಬಿ.ಬಿ.ಎಸ್. ಪದವೀಧರರಿಗೂ ಮತ್ತು ಡಿಪ್ಲೋಮಾ ಪದವೀಧರರಾದ ಹಿರಿಯ ಸ್ಥಾನಿಯ ವೈದ್ಯರಿಗೆ ಒಂದೇ ವೇತನ ಶ್ರೇಣಿ 15600-38110 A.G.P 2000 ನಿಗದಿ ಮಾಡಲಾಗಿದೆ. ಆದರೆ ಸ್ನಾತ್ತಕೋತ್ತರ ಪದವೀಧರರಿಗೆ ಹಿರಿಯ ಸ್ಥಾನಿಯ ವೈದ್ಯರಾಗಿ 15600-39100 AGP ರೂ.6000.00 ನಿಗದಿ ಆಗಿರುತ್ತದೆ. ಇವುಗಳ ತಾರತಮ್ಯದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ದೇಶಕರಿಗೆ ಸೂಚನೆ ನೀಡಲಾಯಿತು. |
| 8 (10) | ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರು ಸಲ್ಲಿಸಿರುವ ರಾಜೀನಾಮೆಯನ್ನು ಅಂಗಿ ೀಕರಿಸುವ ಬಗ್ಗೆ. | ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಈ ಕೆಳಕಂಡ ನೌಕರರುಗಳು ವೈಯಕ್ತಿಕ ಹಿನ್ನಲೆಯಲ್ಲಿ ತಮ್ಮ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದ್ದು, ಸದರಿ ರಾಜೀನಾಮೆ ಪತ್ರವನ್ನು ಒಪ್ಪಿ ಅಂಗೀಕರಿಸಲಾಯಿತು.<br>1. ಶ್ರೀ. ಅಭಿಲಾಶ್.ವಿ., ಓ.ಟಿ. ತಂತ್ರಜ್ಞರು<br>2. ಶ್ರೀ. ಭಾನುಚಂದ್ರ.ಕೆ.ಎಸ್., ಡಿಸೆಕ್ಷನ್ ಹಾಲ್ ಅಟೆಂಡರ್ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ಅಜೆಂಡಾ | ತೀರ್ಮಾನ |
|---|---|---|
| | | 3. ಶ್ರೀ ಹರೀಶ್ ಕುಮಾರ್, ಶುಶ್ರೂಷಕರು<br>4. ಶ್ರೀಮತಿ ತುಳಸಿ.ಕೆ.ಪಿ. ಶುಶ್ರೂಷಕರು |
| 8(11) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2011-12ನೇ ಮತ್ತು 2012-13ನೇ ಸಾಲಿಗೆ ಹೊರಗುತ್ತಿಗೆ ಸೇವೆ ಒದಗಿಸಿರುವ ಮೆ.ಸಾಯಿ ಸೆಕ್ಯೂರಿಟಿಸ್, ಬೆಂಗಳೂರು, ಏಜೆನ್ಸಿಯ ನಿಯೋಜಿತ ಸಿಬ್ಬಂದಿಗೆ ಪಾವತಿಸಬೇಕಾದ ವೇತನಕ್ಕೆ ಅನುಮೋದನೆ ಪಡೆಯುವ ಬಗ್ಗೆ. | 2011-12ನೇ ಸಾಲಿನ ಟೆಂಡರ್ ಅವಧಿ ದಿನಾಂಕ:31-5-2012ರ ಅಂತ್ಯಕ್ಕೆ ಮುಗಿಯುವುದರಿಂದ ಬಾಕಿ ಪಾವತಿಸಬೇಕಾಗಿರುವ ಅವಧಿಯಲ್ಲಿ 31-05-2012ವರೆಗೆ ಪಾವತಿ ಮಾಡಲು ಹಾಗೂ ದಿನಾಂಕ:01-06-2012 ರಿಂದ 31-03-2013ರವರೆಗೆ ಕೆ.ಟಿ.ಟಿ.ಪಿ ನಿಯಮ 4(ಜಿ) ಅಡಿಯಲ್ಲಿ ಸರ್ಕಾರದ ಅನುಮತಿ ಪಡೆದು ಪಾವತಿಸಲು ತೀರ್ಮಾನಿಸಲಾಯಿತು. |
| 8(12) | ಶ್ರೀ.ಶ್ಯಾಮರಾಜ ಉಡುಪ. ಟಿ. ಸಹಾಯಕ ಪ್ರಾಧ್ಯಾಪಕರು, ಜೀವರಸಾಯನ ಶಾಸ್ತ್ರ ವಿಭಾಗ ಇವರು ಪಿ.ಹೆಚ್.ಡಿ.ಗಾಗಿ ಪಾವತಿಸಿರುವ ಎಲ್ಲಾ ಶುಲ್ಕಗಳನ್ನು ಮರುಪಾವತಿಸುವಂತೆ ಕೋರಿ ಸಲ್ಲಿಸಿರುವ ಮನವಿ ಪತ್ರದ ಬಗ್ಗೆ. | ಶ್ರೀ.ಶ್ಯಾಮರಾಜ ಉಡುಪ. ಟಿ. ಸಹಾಯಕ ಪ್ರಾಧ್ಯಾಪಕರು, ಜೀವರಸಾಯನ ಶಾಸ್ತ್ರ ವಿಭಾಗ ಇವರು ಪಿ.ಹೆಚ್.ಡಿ.ಗಾಗಿ ಪಾವತಿಸಿರುವ ಎಲ್ಲಾ ಶುಲ್ಕಗಳನ್ನು ಮರುಪಾವತಿಸುವಂತೆ ಕೋರಿ ಸಲ್ಲಿಸಿರುವ ಮನವಿ ಪತ್ರದ ಬಗ್ಗೆ ಚರ್ಚಿಸಲಾಯಿತು. ಸರ್ಕಾರದ ಪೂರ್ವಾನುಮತಿ ಪಡೆಯದೆ ಸದರಿ ನೌಕರರು PHD ಮಾಡುವ ಸಂಸ್ಥೆಗೆ ಶುಲ್ಕವನ್ನು ಪಾವತಿಸಿದ್ದಾರೆ ಆದುದರಿಂದ ಈ ಶುಲ್ಕವನ್ನು ಮರುಪಾವತಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು.<br>``ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು``. |

(ಡಾ. ಎನ್.ರಾಚೇಗೌಡ)
ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆಡಳಿತ ಮಂಡಳಿ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

(ಡಾ.ಕೆ.ಹೆಚ್.ಗೋವಿಂದರಾಜು)
ಸರ್ಕಾರದ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ ಹಾಗೂ
ಉಪಾಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

(ಡಾ.ಶರಣ ಪ್ರಕಾಶ್ ಪಾಟೀಲ್)
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.